STATEMENT OF THE CHIEF MINISTER

Re .—Issue of 2 grams of Rise per month in Belgaum and (ii) Staging of Satyagraha in these parts.

†ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು) .—ಅಧ್ಯಕ್ಷರೇ, ಶ್ರೀಮಾನ್ ದೇವೇಗೌಡರು ಅಕ್ಕಿಯ ಬಗ್ಗೆ ಪ್ರಸ್ತಾಪ ಮಾಡಿ ಎರಡು ಗ್ರಾಂ ಅಕ್ಕಿಯನ್ನು ಒಂದು ದಿವಸಕ್ಕೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ ಇವತ್ತು ಕೊಡುತ್ತಾ ಇರುವಷ್ಟು ಅಕ್ಕಿ ಸಾಲದೆ ಇರಬಹುದು.

ಶ್ರೀ ಎಚ್. ಡಿ. ದೇವೇಗೌಡ .—ಒಂದು ತಿಂಗಳಿಗೆ ಎರಡು ಗ್ರಾಂ ಕೊಟ್ಟಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ .—ಒಂದು ತಿಂಗಳಿಗೆ ಕೆಲವು ಕಡೆ ಒಂದೊಂದು ಕೆ.ಜಿ. ಕೊಟ್ಟಿದ್ದಾರೆ. Thousand grams make one K.G. ಈ ಬಿಲ್‌ನಲ್ಲಿ ಕೊಟ್ಟಿರುವುದು ೩೫೦ ಗ್ರಾಂಗಳು, ಯಾವ ಏರಿಯಾದ್ದೋ ಕ್ಯಾಷ್ ಬಿಲ್ ಕೊಟ್ಟಿದ್ದಾರೆ. ಇದು ಯಾವ ಡಿಪೋದ್ದು ಇರಬಹುದೋ, ಅದನ್ನು ನಾನು ನೋಡಿಸಬೇಕು. ಅಕ್ಕಿಯನ್ನು ಹೆಚ್ಚಾಗಿ ಕೊಡುವುದಕ್ಕೆ ಆಗಲಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಒಂದೊಂದು ಕಡೆ ಎರಡು ಕೆ.ಜಿ. ಕೊಡುತ್ತೇವೆ, ಅದನ್ನು ಕೊಡಬೇಕಾದರೂ ಕಷ್ಟದಿಂದ ಕೊಡುತ್ತಿದ್ದೇವೆ. ಶೇಖರಿಸಿಟ್ಟಿರತಕ್ಕ ಧಾನ್ಯಗಳನ್ನು ಎಲ್ಲೆಲ್ಲಿಗೆ ರಿಲೀಸ್ ಮಾಡಬೇಕು ಎನ್ನುವುದನ್ನು ನೋಡಿ ಮಾಡುತ್ತಿದ್ದೇವೆ. ಇದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಬಹಳ ಕಷ್ಟ ಇದೆ.

ಇನ್ನು ಸತ್ಯಾಗ್ರಹದ ವಿಚಾರ ಈಗಾಗಲೇ ಅದು ಪತ್ರಿಕೆಯಲ್ಲಿ ಬಂದಿದೆ. ನಮ್ಮ ಪಕ್ಷದ ಯುವಕ ಕಾಂಗ್ರೆಸ್ಸಿನವರು ಕೂಡ ಕೆಲವು ಜನರು ಅಲ್ಲಿಗೆ ಹೋಗುತ್ತಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿದೆ ಎಂದು ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ ಹೋಗುತ್ತಾ ಇರಬಹುದು. ಸತ್ಯಾಗ್ರಹ ಅಹಿಂಸಾತ್ಮಕ ಮಾರ್ಗದಲ್ಲಿ ನಡೆಯಬೇಕು, ಯಾವ ಒಂದು ಲಾ ಅಂಡ್ ಆರ್ಡರ್ ಪ್ರಾಬ್ಲಿಮ್ ಬರಬಾರದ ಎನ್ನುವುದನ್ನು ಅವರು ತಿಳಿಸಿದ್ದಾರೆ. ಅದಕ್ಕಾಗಿ ನಾನು ಅವರನ್ನು ಪಂದಿಸುತ್ತೇನೆ ಪಂದಿಸುವುದಕೆ ಕಾರಣವಾದರೂ ಇಷ್ಟೆ, ಇಂಥ ಸಂದರ್ಭದಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಬರಬಾರದು, ಹಿಂಸಾಕೃತ್ಯ ಈ ಕಠಿಣ ಸಮಸ್ಯೆಯನ್ನು ಎಲ್ಲರೂ ಸೇರಿ ಎದುರಿಸಬೇಕು, ಇಂಥ ಅಭಿ ವ್ಯಯ ಅವರಲ್ಲಿ ಇದೆಯೆಂದು ನನಗೆ ನಂಬಿಕೆ ಇದೆ. ಅದನ್ನು ನಾನು ಮನವರಿಕೆ ಮಾಡಿಕೊಂಡೆ, ಮತ್ತು ಅವರು ಅದನ್ನು ದೀರ್ಘವಾಗಿ ಅಲ್ಲಿ ಆಚರಣೆ ಮಾಡಲಿ ಎಂದು ನನ್ನ ಪ್ರಾರ್ಥನೆ. ಈಗ ಬಂದಿರತಕ್ಕ ಕ್ಷಾಮ ನಮ್ಮಿಂದ ನಿರ್ಮಿತವಾದದು ಅಲ್ಲ, ಈ ಸರ್ಕಾರದಿಂದ ನಿರ್ಮಿತವಾದುದು ಅಲ್ಲ. ಅದು ದೈವೀಕೃತವಾಗಿರತಕ್ಕಂಥಾದ್ದು. ಇಂಥ ಸಂದರ್ಭ ಅನೇಕ ಕಡೆ ಒದಗಿದಾಗ, ನಾನು ವಿರೋಧಪಕ್ಷದ ಸದಸ್ಯರಲ್ಲಿ ಪ್ರಾರ್ಥನೆ ಮಾಡಿ ಹೇಳುತ್ತೇನೆ, ಇಂಥ ಸಂದರ್ಭದಲ್ಲಿ ನಾವು ನೀವು ಸೇರಿ ಈ ಸಮಸ್ಯೆಯನ್ನು ಎದುರಿಸೋಣ, ಜನಗಳ ಕಷ್ಟವನ್ನು ಪರಿಹಾರ ಮಾಡಲಿಕ್ಕೆ ಒಗ್ಗಟ್ಟಿನಿಂದ ಪ್ರಯತ್ನ ಮಾಡೋಣ ಎಂದು. ಪ್ರಜಾತಂತ್ರದಲ್ಲಿ ಆಡಳಿತ ಪಕ್ಷದ ಹಾಗೂ ಪ್ರತಿಪಕ್ಷ ಎಂದು ಆದ ತಕ್ಷಣ ಎಲ್ಲಾ ಸಮಸ್ಯೆಗಳಲ್ಲಿಯೂ ಒಬ್ಬರಿಗೊಬ್ಬರು ತಿಕ್ಕಾಟ ಮಾಡಬೇಕು ಎಂದು ಎಲ್ಲೂ ಇದ್ದ ಹಾಗೆ ನನ್ನ ಚಿಕ್ಕ ಅನುಭವದಲ್ಲಿ ಕಾಣಲಿಲ್ಲ. ಎಷ್ಟೋ ಸಮಯದಲ್ಲಿ ನ್ಯಾಷನಲ್ ಎಮೆರ್ಜೆನ್ಸಿ ಬಂದಾಗ, ನ್ಯಾಷನಲ್ ಸಿಚ್ಯುಯೇಷನ್, ನ್ಯಾಷನಲ್ ಕೆಲಾಮಿಟಿ ಬಂದಾಗ ಉಭಯತ್ರರು ಸೇರಿ ಕೆಲಸ ಮಾಡತಕ್ಕಂಥಾದ್ದು, ಅದನ್ನು ಎದುರಿಸಬೇಕಾದದ್ದು ಇದೆ. ನಾನು ಅದಕ್ಕೆ ಹೇಳುತ್ತೇನೆ, ಹಿಂಸಾ ಮಾರ್ಗ ತ್ಯೆಜಿಸಿ, ಅಹಿಂಸಾ ಮಾರ್ಗದಲ್ಲಿ ಮಾಡುತ್ತೇವೆಂದು ಇಟ್ಟು ಕೊಂಡರೂ ಸತ್ಯಾಗ್ರಹದಿಂದ ಸಮಸ್ಯೆ ಬಗೆಹರಿಯುತ್ತದೆಯೇ ಎಂದು. ಮಾನ್ಯ ವಿರೋಧಪಕ್ಷದ ನಾಯಕರು ದಯಮಾಡಿ ಇದರ ಬಗ್ಗೆ ಚಿಂತನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಹಾತ್ಮ ಗಾಂಧೀಜಿಯವರು 'ಸತ್ಯಾಗ್ರಹದ' ಒರಿಜಿನರೇಟರ್. ಸತ್ಯಾಗ್ರಹ ಎನ್ನುವುದು ಹೇಗೆ ಅವರ ಮನಸ್ಸಿಗೆ ಭಾಸವಾಯಿತೋ ?

ಶ್ರೀ ಕಾಗೋಡು ತಿಮ್ಮಪ್ಪ .—ಇದು ಬಹಳ ದಿವಸದಿಂದ ಮರೆತು ಹೋಗಿತ್ತು.

ಶ್ರೀ ಡಿ. ದೇವರಾಜ ಅರಸ್.—ನಮ್ಮ ಮನೆಯಲ್ಲಿರತಕ್ಕ ಸ್ತ್ರೀಯರಿಗೆ ಸತ್ಯಾಗ್ರಹದ ವಿಚಾರ ಗೊತ್ತಾಯಿತು. ಗಾಂಧೀಜಿಯವರು ಮಾಡಿದ್ದು ಏನೆಂದರೆ ಒಂದು ಸಾರಿ ಊಟ ಮಾಡದೆ ಇದ್ದುದು, ಅದು ಹಾಗೇ ಡೆವಲಪ್ ಆಗಿ ಶಾಸ್ತ್ರೀಯವಾದ ಹಿನ್ನೆಲೆಯಾಯಿತು. ಒಂದು ಅಂಶ ಏನೆಂದರೆ ಇದರಲ್ಲಿ ಸತ್ಯ ಮತ್ತು ಅಗ್ರಹ ಎರಡು ಸೇರಬೇಕು. ಆಗಲೇ ಸತ್ಯಾಗ್ರಹವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ .—ಬರೀ ಆಗ್ರಹ ಇರಬಾರದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ನಾಗರಾಜ ಅವರು ಇದರ ಬಗ್ಗೆ ನಾನು ಮಾತನಾಡಿದರೆ ಕೋಪ ಮಾಡಿಕೊಳ್ಳುತ್ತಾರೆ. ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು. ನಮಗಿಂತ ವಯಸ್ಸಾದವರು, ಇವರೂ ಕೂಡ ಸತ್ಯಾಗ್ರಹ ಮಾಡುವುದಕ್ಕೆ ಹೋದರು ಎಂದು ಹೇಳಿಂತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧಿಕಾರ ಕಳೆದುಕೊಂಡ ಮೇಲೆ ಎಲ್ಲರೂ ಮಾಡುವುದು ಅದನ್ನೇ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಅಧಿಕಾರದಲ್ಲಿದ್ದಾಗ ಸತ್ಯಾಗ್ರಹದ ಅವಶ್ಯಕತೆ ಇತ್ತೇ ?

ಶ್ರೀ ಡಿ. ದೇವರಾಜ ಅರಸ್ .—ಮಾನ್ಯ ರಾಮಕೃಷ್ಣ ಹೆಗಡೆ ಅಂಥವರು ಸತ್ಯಾಗ್ರಹ ಮಾಡುತ್ತೇವೆಂದು ಹೇಳಿದರೆ ಅವರಿಗೆ ಇನ್ನೂ ಅಷ್ಟು ಗೊತ್ತಾಗಲ್ಲ, ಪೂರ್ತಿ ತಿಳುವಳಿಕೆ ಇಲ್ಲದೆ ಮಾಡುತ್ತಾರೆ ಎಂದು ಅರ್ಥವಾಗುತ್ತದೆ. ನಿಜಲಿಂಗಪ್ಪನವರು ಈ ವಿಚಾರದಲ್ಲಿ ಸತ್ಯಾಗ್ರಹ ಮಾಡುತ್ತೇವೆಂದು ಹೇಳಿದರೆ ನಾವು ದಿಗ್ಮೂಢರಾಗಿ ಯೋಚನೆ ಮಾಡಬೇಕಾಗಿದೆ. ಇದು ಹಾಸ್ಯಾಸ್ಪದ ಹೇಳಂವ ಪ್ರಶ್ನೆ ಅಲ್ಲ. ಎಷ್ಟೋಸಾರಿ ಸಂತಂಥವರು ಸರ್ವೆ ಸಾಧಾರಣವಾಗಿ ವಿಚಾರ ತಿಳಿದುಕೊಂಡು ಸತ್ಯಾಗ್ರಹ ಮಾಡತಕ್ಕದ್ದು ಸರಿ. ಈಗ ಇವರು ಸತ್ಯಾಗ್ರಹ ಮಾಡತಕ್ಕ ಪ್ರಮೇಯ ಏನು ಎಂಬುದು ನನ್ನ ಮನಸ್ಸಿಗೆ ಹಿಡಿಸಲಿಲ್ಲ ಮತ್ತು ಅರ್ಥವಾಗಲಿಲ್ಲ. ಕಾಂಗೋ 'ಓ' ಪ್ರಕ್ಷಪಿಂದ ಸತ್ಯಾಗ್ರಹ ಮಾಡ ಬೇಕು ಎಂದು ಪ್ರಯತ್ನ ಮಾಡಿದ್ದಾರೆ. ಗೌರ್ನರಿಗೂ ಕೊಟ್ಟಿದ್ದಾರೆ ನನಗೂ ಕಳುಹಿಸಿದ್ದಾರೆ. ಶಾಶ್ವತವಾದ ಕೆಲಸಮಾಡಬೇಕು ಎನ್ನುವ ಪಟ್ಟಿಯನ್ನು ಬರವಿದ್ದಾರೆ, ಅದರ ಬಗ್ಗೆ ನನಗೂ ಸಹಾನು ಭೂತಿ ಇದೆ. ಅದರಲ್ಲಿ ಹೇಳಿರುವ ಅನೇಕ ಸಲಹೆಗಳನ್ನು ಕಾರ್ಯಗತ ಮಾಡುತ್ತಿದ್ದೇವೆ. ಒಂದು ವೇಳೆ ಏನಾದರೂ ಉಳಿದುಕೊಂಡಿದ್ದರೆ .....

ಶ್ರೀ ಎಚ್. ಡಿ. ದೇವೇಗೌಡ.—ನಾನು ಗೌರ್ನರ್ ಭಾಷಣದ ಮೇಲೆ ಮಾತನಾಡುವಾಗ ಕ್ಲೀಯರ್ ಆಗಿ ಹೇಳಿದೆ, ಏನು ನಾವು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ ಅದರಿಂದ ಈಗ ಇರುವ ಸಂದರ್ಭವನ್ನು ದುರುಪಯೋಗ ಮಾಡಿಕೊಳ್ಳಬೇಕು ಎನ್ನುವ ಪ್ರಶ್ನೆ ಇಲ್ಲ. ಇದು ದೈವದತ್ತವಾಗಿ ಒದಗಿದೆ. ಸರ್ಕಾರದ ಮೇಲೆ ಗೂಬೆ ಕೂಡಿಸಬೇಕು ಎಂದು ಇಲ್ಲ. ಕೆಲವು ಸಮಸ್ಯೆಗಳನ್ನು ಬಗೆಹರಿಸ ಬೇಕು ಶಾಶ್ವತವಾದ ಬೇಡಿಕೆಗಳನ್ನು ಈಡೇರಿಸಿ ಎಂದು ಹೇಳಿದ್ದೇವೆ. ಕೆಲವು ಬೇಡಿಕೆಗಳನ್ನು ಕಾರ್ಯಗತ ಮಾಡುವುದಕ್ಕೆ ನಿರ್ಣಯ ತೆಗೆದುಕೊಂಡು ಆದರಲ್ಲಿ ಕೆಲವು ಕಾರ್ಯಗತ ಆಗುತ್ತಾ ಇವೆ. ಇನ್ನು ಬೇಡಿಕೆಗಳು ಏನು ಇವೆ ಅವನ್ನು ಜನತೆ ಹಿತದೃಷ್ಟಿಯಿಂದ ಆ ಅಭಿಪ್ರಾಯವನ್ನು ಮುಂದೆ ಇಟ್ಟಿದ್ದೇವೆ. ಒಂದು ವೇಳೆ ಸರ್ಕಾರದವರು ತೆಗೆದುಕೊಂಡಿರತಕ್ಕ ನಿರ್ಣಯದಲ್ಲಿ ಸಮಸ್ಯೆ ಎಬ್ಬರಿಸುವುದಕ್ಕೆ ಸಾಕಷ್ಟು ಆಗಿದ್ದಿದ್ದರೆ ಹೀನೇ ತಾರೀಖು ಸತ್ಯಾಗ್ರಹ ಪ್ರಾರಂಭ ಮಾಡಬೇಕು ಎಂದು ಮಾಡಿಕೊಂಡಿದ್ದೇವೆ ಅದನ್ನು ಕಾಲ್ ಆಫ್ ಮಾಡುವುದು ದೊಡ್ಡದು ಅಲ್ಲ. ಈ ವಿಷಯ ನಿಮ್ಮ ಮುಂದೆ ಇಟ್ಟಿದ್ದೇವೆ. ಈಡೇರತಕ್ಕ ಸಮಸ್ಯೆಗಳನ್ನು ಈಡೇರಿಸುವುದಕ್ಕೆ ಸರ್ಕಾರ ಎಲ್ಲಾ ರೀತಿಯ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವುದಾದರೆ ಸತ್ಯಾಗ್ರಹ ಮುಂದುವರಿಸಬೇಕೇ ಬೇಡವೇ ಎನ್ನುವ ಪ್ರಶ್ನೆ That would be decided at a later stage. It is not a big problem.

ಶ್ರೀ ವಾಟಾಳ್ ನಾಗರಾಜ್.—ಹೀನೇ ತಾರೀಖು ಏನು ಸತ್ಯಾಗ್ರಹ ಮಾಡಬೇಕು ಎಂದು ಇದ್ದಾರೆ ಅದಕ್ಕೆ ಮುಂಜಿ ಒಂದು ಸಲಹೆ ಮಾಡುತ್ತೇನೆ. ಎಲ್ಲಾ ಪಾರ್ಟಿ ಲೀಡರ್ಸ್, ರೌಂಡ್ ಟೇಬಲ್ ಕಾನ್ ಫೆರೆನ್ಸ್ ಹಿನೇ ತಾರೀಖಿಗೆ ಕರೆಯಿರಿ. ಇನ್ನು ಅನೇಕ ಪಾರ್ಟಿಗಳು ಹೊರಗಡೆ ಕೂಡ ಇವೆ. ಇಲ್ಲಿ ಇಲ್ಲದೆ ಇರುವವರು ಬೇರೆ ಲೀಡರ್ಸ್ ಇದ್ದಾರೆ. ಅವರೆಲ್ಲರ ಕಾನ್ಫೆರೆನ್ಸ್ ಕರೆಯಿರಿ.

ಶ್ರೀ ಡಿ. ದೇವರಾಜ್ ಅರಸ್.—ನಾನೇ ಮಾತನಾಡೋಣ.

ಶ್ರೀ ವಾಟಾಳ್ ನಾಗರಾಜ್ .—ಎಲ್ಲಾ ಪಾರ್ಟಿಯವರನ್ನು ಕರೆದು ತೀರ್ಮಾನಕ್ಕೆ ಬರಬೇಕು ಎಂದು ಅಭಿಪ್ರಾಯ ಇದ್ದರೆ ಎಲ್ಲಾ ಪಾರ್ಟಿಯವರನ್ನು ಒಳಗೊಂಡ ಒಂದು ಮೀಟಿಂಗ್ ಕರೆಯಿರಿ.

ಶ್ರೀ ಕಾಗೋಡು ತಿಮ್ಮಪ್ಪ .—ಶ್ರೀ ನಿಜಲಿಂಗಪ್ಪನವರು ೨೫ ವರ್ಷಗಳಿಂದ ಜೈಲು ನೋಡಲಿಲ್ಲ, ನಾವು ನೋಡಿದ್ದೇವೆ. ಜೈಲಿಗೆ ಹೋಗಬೇಕು, ಆಗ ಅವರಿಗೆ ಜೈಲಿನಲ್ಲಿನ ಕಷ್ಟ ಸುಖಗಳು ಗೊತ್ತಾಗುತ್ತವೆ. ಅಧಿಕಾರಕ್ಕೆ ಬಂದ ಮೇಲೆ ಜೈಲಿಗೆ ಹೋಗಲಿಲ್ಲ. ಜೈಲಿಗೆ ಹೋಗುವ ಕಾರ್ಯಕ್ರಮವನ್ನು ನಿಲ್ಲಿಸುವುದಕ್ಕೆ ಹೋಗಬೇಡಿ.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ತಿಮ್ಮಪ್ಪನವರು ನಾನೂ ವಯಸ್ಸಿನಲ್ಲಿ ಚಿಕ್ಕವರು. ಅವರು ಈ ಸಭೆಯಲ್ಲಿ ಇಲ್ಲ. ಅಂಥವರ ವಿಷಯದಲ್ಲಿ ಅಷ್ಟು ಲಘುವಾಗಿ ಮಾತನಾಡುವುದನ್ನು ನಿಲ್ಲಿಸಬೇಕು. ಒಳ್ಳೆಯ ಕೆಲಸ ಮಾಡಿದ್ದರೆ ನೆನಿಸಿಕೊಳ್ಳಬೇಕು, ನಾಳೆ ಈ ಸ್ಥಾನ ಬಟ್ಟಹೋದ ಮೇಲೆ ಜನರು ಬೇರೆ ಮಾತನಾಡುವ ಅವಕಾಶ ಇರುತ್ತದೆ. ಶ್ರೀಮಾನ್ ದೇವರಾಜ ಅರಸ್ ಅವರು ಕರ್ನಾಟಕ ಹೆಸರು ಇಡುವ ಕೆಲಸ ಮಾಡಿದರು, ಅದಕ್ಕೆ ಜನ ಅಭಿನಂದಿಸಬೇಕಾಗುತ್ತದೆ. ಒಳ್ಳೆಯ ಕೆಲಸ ಮಾಡಿದರೆ ಯಾರು ಬೇಡ ಎನ್ನುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಜೈಲಿಗೆ ಹೋಗುವುದನ್ನು ಏತಕ್ಕೆ ತಡೆಯಬೇಕು ?

ಶ್ರೀ ಎಚ್. ಡಿ. ದೇವೇಗೌಡ.—ನಿಜಲಿಂಗಪ್ಪನವರು ಬಗ್ಗೆ ಲಘುವಾಗಿ ಕೇವಲ ರಾಜಕೀಯ ಕಾರಣಕ್ಕೋಸ್ಕರ ಮಾತನಾಡುವುದು ಬೇಡ. ಅವರು ರಾಜಕೀಯದಲ್ಲಿ ಕಳೆದಿರುವಷ್ಟು ಕಾಲ ನನಗೆ ವಯಸ್ಸಾಗಿಲ್ಲ. ನಮಗೆ ಅನುಭವ ಸಾಲದು. ಆ ರೀತಿ ಮಾತನಾಡುವುದನ್ನು ಬಿಟ್ಟುಬಿಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಅವರ ಬಗ್ಗೆ ಏನೂ ಇಲ್ಲ. ಅವರು ಹಿಂದೆ ಜೈಲಿಗೆ ಹೋದ ನೆನಪು ಮರೆತು ಹೋಗಿದೆ ಆದ್ದರಿಂದ ಅವರು ಮತ್ತೊಂದು ಸಾರಿ ಸತ್ಯಾಗ್ರಹಕ್ಕೆ ನವಚೈತನ್ಯ ಕೊಟ್ಟರೆ ಅದನ್ನು ನಾನು ಸ್ವಾಗತಮಾಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಶ್ರೀಮಾನ್ ದೇವೇಗೌಡರಿಗೆ ೩೯ ವರ್ಷ ಆಗಿರಬಹುದು. ಬಹಳ ಚಿಕ್ಕವಯಸ್ಸಿನವರು. ಆದರೆ ನನಗೆ ಶ್ರೀ ನಿಜಲಿಂಗಪ್ಪನವರಿಗೆ ೧೦ ವರ್ಷ ವಯಸ್ಸು ಹೆಚ್ಚುಕಡಿಮೆ ಇರಬಹುದು. ರಾಜಕೀಯದಲ್ಲಿ ೨೦ ವರ್ಷ ನಮಗಿಂತ ಹಳಬರೇನಲ್ಲ ನನಗಿಂತ ಮೂರೂ ವರ್ಷ ಹಿಂದೆ ಕಾಂಗ್ರೆಸ್ಸಿಗೆ ಸೇರಿದ್ದರು, ನನಗೆ ಮಾತನಾಡುವುದಕ್ಕೆ ಅಧಿಕಾರವಿದೆ. ತಾವು ಹೇಳುವುದು ಸರಿ. ತಿಮ್ಮಪ್ಪನವರು ಹೇಳಿದ ಮಾತಿಗೆ ನೀವು ಏತಕ್ಕೆ ಆಕ್ಷೇಪಣೆ ತೆಗೆದುಕೊಳ್ಳುತ್ತೀರಿ ? ಅವರ ಬಗ್ಗೆ ಇವರ ಬಗ್ಗೆ ಅಗೌರವವಾದ ಮಾತುಗಳನ್ನು ಆಡುವುದಕ್ಕೆ ನಾನು ಹಿದ್ದೆನಿಲ್ಲ ಆಡಬೇಕಾದ ಅಗತ್ಯವೂ ಇಲ್ಲ. ಅಗಲೂ ಆಡಿಲ್ಲ ಈಗಲೂ ಆಡುವುದಿಲ್ಲ. ಅವರ ವಿರುದ್ಧ ಮಾತನಾಡುವುದು ಬೇರೆಯವರ ಜಾಳಿ ಇತ್ತು. ಅದನ್ನು ಅನುಭವಿಸುವವರು ಬೇರೆ ಜನ ಇದ್ದಾರೆ. ಚಿಕ್ಕವರೇ ಆಗಲಿ, ದೊಡ್ಡವರೇ ಆಗಲಿ ಅವರ ಬಗ್ಗೆ ಅಗೌರವ ನುಡಿಯಂಬುದಿಲ್ಲ. ಅದು ನಮ್ಮ ಸಣ್ಣತನ ತೋರಿಸುತ್ತದೆ. ಅವರ ಬಗ್ಗೆ ಅಗೌರವದ ಪ್ರಶ್ನೆ ಇಲ್ಲ. ಶ್ರೀ ದೇವೇಗೌಡರು ಒಂದು ಸಮಸ್ಯ ಬಗ್ಗೆ ಹೇಳಿದ್ದಾರೆ. ಬರೆದಿರತಕ್ಕ ಎಲ್ಲಾ ವಿಚಾರಗಳನ್ನೂ ಸರ್ಕಾರ ಮಾಡಲಿಕ್ಕೆ ಆಗಲಿಲ್ಲ ಎಂದು ಸತ್ಯಾಗ್ರಹ ಮಾಡುತ್ತಾ ಇಲ್ಲ. ಬಹುಭಾಗ ವಿಚಾರ ನಾವೇ ಯೋಚನೆ ಮಾಡುತ್ತಿದ್ದೇವೆ. ನೀರಿನ ಸಮಸ್ಯೆ ಬಗೆಹರಿಸಬೇಕು ಕೆಲಸ ಹೆಚ್ಚಿಗೆ ಕೊಡಬೇಕು, ಮೈನರ್ ಇರಿಗೇಷನ್‌ಗೆ ಪ್ರಾಧಾನ್ಯತೆ ಕೊಡಬೇಕು ಮಿಡಿಯಮ್ ಇರಿಗೇಶನ್ ತೆಗೆದುಕೊಳ್ಳಬೇಕು ಫಾಡರ್ ಬಗ್ಗೆ ಸರ್ಕಾರ ಸಾಧ್ಯವಾದುದನ್ನು ಮಾಡಿ ಫಾಡರ್ ಒದಗಿಸಿಕೊಡಬೇಕು ಎಂದು ಅನೇಕ ವಿಚಾರಗಳನ್ನು ಅವರು ಬರೆದಿದ್ದಾರೆ ನಾವು ಸಾಧ್ಯವಾದಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಒಂದುವೇಳೆ ತಾವು ಬರೆದಿರತಕ್ಕ ಎಲ್ಲಾ ವಿಚಾರಗಳಲ್ಲಿ ಕೆಲವು ವಿಚಾರಗಳಲ್ಲಿ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಹೋದರೆ ನಾವು ನೀವು ಕಲೆತಾಗ ಸ್ವಾಮಿ ಇಂಥ ಕಾರ್ಯ ಮಾಡಿದ್ದೇವೆ, ಇಂಥ ಕಾರ್ಯಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಸಾಧ್ಯವಿಲ್ಲದೆ ಇರುವುದಕ್ಕೆ ಹಿನ್ನಲೆ ಮತ್ತು ಕಾರಣ ಏನು ಇದೆ, ತೊಂದರೆ ಏನು ಇದೆ, ಎಂಬುದನ್ನು ನಾವು ಹೇಳಬಹುದು, ನೀವು ಅದನ್ನು ಕೇಳಬೇಕಾಗುತ್ತದೆ. ನಾವು ಅಷ್ಟು ಡಿಮಾಂಡ್ ಹೇಳಿದೆವು ಅದಾಗಲಿಲ್ಲ ಅದಕ್ಕಾಗಿ ಸತ್ಯಾಗ್ರಹ ಮಾಡುತ್ತೇವೆ ಎಂದಳ ಅದು ಉಚಿತವೇ ಎಂದು ಯೋಚನೆಮಾಡಿ. ಈಗಲೂ ನಾನು ತಮ್ಮಲ್ಲಿ ಮತ್ತು ತಮ್ಮ ಮುಖಾಂತರ ತಮ್ಮ ಪಕ್ಷದವರಿಗೆ ನನ್ನ ಮನವಿ ಏನು ಎಂದರೆ ಸತ್ಯಾಗ್ರಹದ ವಿಚಾರ ಬಿಡಿ. ಇದು ಕೇವಲ ವೈಯಕ್ತಿಕ ಸತ್ಯಾಗ್ರಹವಲ್ಲ ಜನತೆಯನ್ನು ಕೂಡಿಸುವುದಕ್ಕೆ ಹೊರಟ್ಟಿದ್ದೀರಿ. ಪಿಕೆಟಿಂಗ್ ಮಾಡುವುದಕ್ಕೆ ಹೊರಟಿದ್ದೀರಿ. ತಾವು ಇದರಲ್ಲಿ ಇಲ್ಲಾ ಎಂದು ಹೇಳುತ್ತಾ ಇಲ್ಲ. ನಮಗೂ ಇದರ ವರ್ತಮಾನ ಬಂದಿದೆ. ಪತ್ರಿಕೆಗಳಲ್ಲಿ ಓದಿದ್ದೇನೆ ಬೇರೆ ಕಡೆಯಿಂದ ರಿಪೋರ್ಟು ಬಂದಿದೆ. ಇದು ಎಷ್ಟು ಸಾವಿರಜನ ಸೇರಿಸುತ್ತೀರಿ ಎನ್ನುವ ವಿಚಾರವಲ್ಲ. ಎಲ್ಲರ ಕಡೆ ಹೋಗಿ ಜನಕೆಳಂ ನಮ್ಮಕಡೆ ಬರಬೇಕು ಎಂದು ಆರ್ಗನೈಸ್ ಮಾಡುತ್ತಾ ಇರತಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ನಾವೂ ರಾಜಕೀಯ ಜೀವಿಗಳೇ ಅವರು ರಾಜಕಾರಣ ಮಾಡುವುದಕ್ಕೆ ಹೊರಟರೆ ನಾವು ಸುಮ್ಮನೆ ಕೂರುಕೊಳ್ಳುವುದಕ್ಕೆ ಆಗುವುದಿಲ್ಲ, ನೀವು ಶಕ್ತಾನುಸಾರ ಜನ ಕೂಡಿಸಿಬರೆ ನಾವು ಶಕ್ತಾನುಸಾರವಾಗಿ ದೇಶದಲ್ಲಿ ಜನ ಕೂಡಿಸಬೇಕಾಗುತ್ತದೆ ?

SRI H. D. DEVE GOWDA.—You are going too far. You do not go to that extent to threten me.

SRI D. DEVARAJA URS.—I am on my legs. I cannot allow him to speak.

SRI H. D. DEVE GOWDA.—You are going too far. ನಾನು ಬಹಳ ಸೌಮ್ಯವಾಗಿ ಹೇಳಿದ್ದೇನೆ, ನೀವು ಮುಖ್ಯಮಂತ್ರಿಗಳಾಗಿ, ಅಧಿಕಾರ ದರ್ಪದ ಮಾತನ್ನು ಆಡುವುದನ್ನು ದಯವಿ ಮಾಡಿ for God's sake ನಿಲ್ಲಿಸಿ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮಿಂದ ದರ್ಪ ಕಲಿತುಕೊಳ್ಳಬೇಕಾಗಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಏನು ಹೇಳಿದೆ ? Why do you unnecessarily provoke me ?

ಶ್ರೀ ದೇವರಾಜ ಅರಸ್.— ಕೋಪ ಏತಕ್ಕೆ ಮಾಡಿಕೊಳ್ಳತ್ತೀರಿ ? ನೀವು ಮಾಡುತ್ತಾ ಇರುವುದನ್ನು ಹೇಳಿದರೆ ನಿಮಗೆ ಕೋಪ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನನ್ನ ಸಲಹೆ ಬಗ್ಗೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್,—ಕಂಡಿದ್ದು ಹೇಳಿದರೆ ಕೆಂಡದಂತಹ ಕೋಪ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಪ್ರವೊಕೇಟ್ ಮಾಡುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ನೀವು ಮಾಡುತ್ತಾ ಇರುವುದು ಎಲ್ಲಾ ಮೊದಲೇ ಹೇಳಿದಿರಿ. ನನಗೆ ಬಂದಿರುವ ವರ್ತಮಾನದ ಪ್ರಕಾರ ಯುವರೀತಿ ಎಲ್ಲೆಲ್ಲಿ ಜನರನ್ನು ಎತ್ತಿ ಕಟ್ಟುವುದಕ್ಕೆ ಹೊರಟಿದ್ದೀರಿ.

10-30 A.M.

ಅದರ ಬಗ್ಗೆ ನನ್ನ ಹತ್ತಿರ ರಿಪೋರ್ಟ್ ಇದೆ ದಯವಿಮಾಡಿ ಅದನ್ನು ಮಾಡುವುದು ಬೇಡ. ಅವರು ಈಗ ಏನೆಂದು ಸಲಹೆ ಮಾಡಿದ್ದಾರೆ ಅದನು ನಾನು ಸ್ವಾಗತಿಸುತ್ತೇನೆ. ಸತ್ಯಾಗ್ರಹ ಮಾಡುವುದನ್ನು ಬಿಡಿ. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಂತೆ ಒಂದು ಮೀಟಿಂಗ್ ಕರೆಯೋಣ, ಅವರೂ ಬಂದು ಸಲಹೆ ಕೊಡಲಿ ಈಗ ಸ್ಟೇಟ್ ಲೆವಲ್ ಕಮಿಟಿ ಮೀಟಿಂಗ್ ನಾಳೆ ಕರೆಯುವುದು ಬೇಡವೇ ? ಎಲ್ಲರೂ ಸೇರಿ ಏನೇನು ಕೆಲಸ ಮಾಡಿದ್ದೇವೆಂದು ಚರ್ಚಿಸೋಣ. ಎಲ್ಲರೂ ಸಲಹೆಗಳನ್ನು ಕೊಡಲಿ, ಅವುಗಳಲ್ಲಿ ಯಾವುದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿದೆ ಅಥವಾ ಇಲ್ಲ ವಿನ್ನುವುದನ್ನು ನೋಡೋಣ. ನಾವು ಒಂದು ಕಳಕಳಿಯ ಮನವಿ ಮಾಡುವುದೇನೆಂದರೆ, ಇದರಲ್ಲಿ ರಾಜಕೀಯ ಮಾಡುವುದು ಬೇಡ, ಎಲ್ಲರೂ ಒಗ್ಗಟ್ಟಾಗಿ ದೇಶದ ಮುಂದೆ ಇರತಕ್ಕ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಐಕ್ಯಮತ್ಯದಿಂದ ಕೆಲಸ ಮಾಡೋಣ. ಒಟ್ಟಿಗೆ ಸೇರಿ ಅದನ್ನು ಎದುರಿಸೋಣ ಜನತೆಗೆ ಇರುವ ಕಷ್ಟವನ್ನು ನಾವೆಲ್ಲ ಸೇರಿ, ನಮ್ಮ ಶಕ್ತಿಮೀರಿ ದುಡಿದು ಅದನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಈ ಹೊತ್ತು ಆದೃಷ್ಟವಶಾತ್ ಕೇಂದ್ರದವರು ನಮ್ಮ ಕೈ ಹಿಡಿಯಲು, ನಮ್ಮ ಕಷ್ಟಗಳನ್ನು ನಿವಾರಣೆ ಮಾಡಲು ಮುಂದೆ ಬಂದಿದ್ದಾರೆ. ಹಣವನ್ನು ಒದಗಿಸುವವರಿದ್ದಾರೆ. ಹಣ ದುರುಪಯೋಗವಾಗುತ್ತಿವ್ವರೆ ತಪ್ಪಿಸೋಣ. ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ, ನೇರವಾಗಿ ಜನರ ಕೈಗೆ ಸಿಕ್ಕುವಂತೆ ಮಾಡೋಣ. ನಾವೆಲ್ಲ ಸೇರಿ ಒಗ್ಗಟ್ಟಿನಿಂದ ಜನತೆಯ ಕಷ್ಟವನ್ನು ಎದುರಿಸುವುದಕ್ಕೆ ಹೊರಟರೆ ಖಂಡಿತವಾಗಿ ಅದನ್ನು ಪರಿಹರಿಸಬಹುದು ಅವರ ಕಷ್ಟ ನೋಡುವುದಕ್ಕೆ ಸಾಧ್ಯವಿಲ್ಲ, ದೇವೇಗೌಡರು ನನಗೆ ದರ್ಪವಿದೆ ಅಂದುಕೊಂಡಿದ್ದಾರೆ, ನನಗೆ ದರ್ಪವಿಲ್ಲ. ಶ್ರೀ ದೇವೇಗೌಡರ ಪರಿಸ್ಥಿತಿ ಏನಾಗಿದೆ ಎಂದರೆ, ಮಹಾಭಾರತದ ಕಥೆಯಲ್ಲಿ ಬರುವ ಶಲ್ಯನ ವಿಚಾರ ತಮಗೆಲ್ಲ ಗೊತ್ತಿರಬಹುದು ಶಲ್ಯ, ಧರ್ಮರಾಯನ ಪಕ್ಷಪಾತಿ ಅವನು ಪಾಂಡವರ ಕಡೆ ಹೋಗಿ ಯುದ್ಧ ಮಾಡಬೇಕೆಂದು ಬರುತ್ತಿದ್ದ ಕೌರವನು ಒಂದು ಉಪಾಯವನ್ನು ತಡೆಗಟ್ಟಿ, ಪಾಂಡವರ ಕಡೆ ಏಕೆ ಹೋಗುತ್ತಿ, ಅವರಿಗೆ ಹೊಟ್ಟೆಗೆ ಇಲ್ಲ, ಅವರು ಅರಣ್ಯದಿಂದ ಈಗತಾನೆ ಬರುತ್ತಿದ್ದಾರೆ, ಅವರಿಗೆ ತಿನ್ನುವುದಕ್ಕೆ ಆನ್ನವಿಲ್ಲ ಎಂದು ಹೇಳಿ ಬೇಕಾದಷ್ಟು ಪೋಡಪೋಪಚಾರ ಮಾಡಿದ. ಕರ್ಣನನ್ನು ಕಂಡಾಗ ಅವನಿಗೆ ಆಗುವುದಿಲ್ಲವೆಂದು ಏನಾದರೂ ಮಾಡಿ ಶಲ್ಯನನ್ನು ಕರ್ಣನಿಗೆ ಸಾರಥಿಯಾಗಿ ತೆಗೆದುಕೊಳ್ಳಬೇಕೆಂದು ಎಲ್ಲ ಚತುರೋಪಾಯಗಳನ್ನೂ ಮಾಡಿ, ಅವನ ಮನವೊಪ್ಪಿಸಿಕೊಂಡು ಧರ್ಮರಾಯನ ಕಡೆ ಹೋಗದೆ ಇದ್ದ ಹಾಗೆ ಮಾಡಿ ಕರ್ಣನಿಗೆ ಸಾರಥಿಯಾಗಿ ಮಾಡಿದ. ಆ ನಂತರ ಏನು ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತು. ಹೀಗೆ ದೇವೆಗೌಡರನ್ನು ನಾನು ನೆನೆಸಿಕೊಂಡಾಗಲೆಲ್ಲ ನನಗೆ ಶಲ್ಯನ ಜ್ಞಾಪಕ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ—ಅವರ ಬಲೆಗೆ ನಾನು ಬೀಳುವುದಕ್ಕೆ ತಯಾರಾಗಿಲ್ಲ. ಅವರು ಕೌರವನ ಪಾತ್ರವನ್ನು ಚೆನ್ನಾಗಿ ಮಾಡುತ್ತಿದ್ದಾರೆ. ನಾನು ಭೀಮನ ಪಾತ್ರ ಮಾಡಬೇಕೆಂದು ಈ ಜಾಗದಲ್ಲಿ ಕುಳಿತಿದ್ದೇನೆ, ಅವರ ಮೇಲೆ ಗದಾ ಪ್ರಹಾರ ಮಾಡುವುದಕ್ಕೆ ಇಲ್ಲಿ ಕುಳಿತಿದ್ದೇನೆ.

Policy of the Minister for Municipal Administration

SRI B. B. SAYANAK (Belgaum).—Madam Speaker, yesterday I have given a Call Attention Notice and you are aware of it. The notice is about the policy of the Municipal Administration Minister. Let me know whether it is admitted.

MADAM SPEAKER.—On Monday we will take it up.

Remarks of Sri H. D. Deve Gowda about contract carriage and a lorry owner

SRI AZEEZ SAIT.—When I was absent on the other day Hon. Member Sri Deve Gowda raised two questions one relating to a contract carriage caught by the Police and the owner of the carriage paid Rs. 10,000 and escaped from the clutches of the law. It seems he got this information from the Police Sub-inspector. I had written a letter to him requesting him to let me know the number of the contract carriage and the name of the Sub-inspector who told him.

The second allegation is about a person by name Sri Muniswamiah a contractor owning a lorry, who was due to Government Rs. 36,000 as tax, has escaped from a prosecution case filed against him by the intervention of Government. I would like to inform the Hon. House that the matter has been referred to the Law Department and it is still under examination of that Department. Sri Deve Gowda is having an apprehension depending upon the rumours that the Government is not doing its duty properly.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಒಳ್ಳೆಯ ಕೆಲಸ ಮಾಡಿದರು. ವಿರೋಧ ಪಕ್ಷದ ನಾಯಕನಾಗಿ ಬೇಜವಾಬ್ದಾರಿ ಮಾತನ್ನು ಆಡಬಾರದು, ಸತ್ಸಂಪ್ರದಾಯವನ್ನು ಹಾಕಿಕೊಂಡು ನಡೆಯಬೇಕೆಂದು ಹೇಳಿದ್ದಾರೆ. ಅವರು ನನಗೆ ಒಂದು ಪತ್ರ ಬರೆದು ಹತ್ತು ಸಾವಿರ ರೂಪಾಯಿ ಕೊಟ್ಟಿರುವುದಾಗಿ ಯಾರು ಹೇಳಿದರು ಎಂದು ಕೇಳಿದ್ದಾರೆ. ನಾನು ಸಂಬಂಧಪಟ್ಟವರಿಗೆ ಒಂದು ಪತ್ರ ಬರೆದಿದ್ದೆ. ಅವರು, ನಾನು ಕೊಟ್ಟಿರುವ ೧೦ ಸಾವಿರ ರೂಪಾಯಿ ವಸೂಲು ಮಾಡುವುದಕ್ಕೇ ಆಗಿಲ್ಲ, ೧೦ ಸಾವಿರ ರೂಪಾಯಿ ಕಳೆದುಕೊಂಡು ಪರ್ಮಿಟ್ ತೆಗೆದುಕೊಂಡಿದ್ದೇನೆ, ಆ ಹಣ ಇನ್ನೂ ಸಂಪಾದನೆ ಯಾಗಿಲ್ಲ, ನೀವು ನನ್ನ ಹೆಸರನ್ನು ಕೊಟ್ಟರೆ ನನಗೆ ಹೆರಾಸ್‌ಮೆಂಟ್ ಆಗಿ ಮತ್ತೆ ೧೦ ಸಾವಿರ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ನನ್ನ ಹೆಸರನ್ನು ಹೇಳದೆ ದಯವಿಟ್ಟು ಉಪಕಾರ ಮಾಡಿ ಎಂದು ಬರೆದಿದ್ದಾರೆ.

SRI AZEEZ SAIT.—Let the Hon. Leader of the Opposition give a correct information otherwise it becomes a breach of privilege.